RVCE Students won the Vidyarthi Snehi College Award

ವಿಜಯವಾಣಿ

# ಬಾಗಲಕೋಟೆಯ ಬಸವೇಶ್ವರ ತಾಂತ್ರಿಕ ಕಾಲೇಜು ಚಾಂಪಿಯನ್

## ಸೃಷ್ಟಿ ಪ್ರಾಜೆಕ್ಟ್ ಪ್ರದರ್ಶನಕ್ಕೆ ತೆರೆ | ಮೂರು ದಿನಗಳ ಮೇಳದಲ್ಲಿ 150 ಕಾಲೇಜುಗಳಿಂದ 280 ಪ್ರಾಜೆಕ್ಟ್‌ಗಳ ಪ್ರದರ್ಶನ

**ವಿಜಯವಾಣಿ ಸುದ್ದಿಜಾಲ** ಬೆಂಗಳೂರು

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ), **'ವಿಜಯವಾಣಿ' ಮತ್ತು 'ದಿಗ್ವಿಜಯ ನ್ಯೂಸ್**24x7 **ನ್ಯೂಸ್'** ಮಾಧ್ಯಮ ಸಹಯೋಗದಲ್ಲಿ ಮೈಸೂರು ರಸ್ತೆಯ ಆರ್.ವಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಏರ್ಪಡಿಸಿದ್ದ ಮೂರು ದಿನಗಳ ತಾಂತ್ರಿಕ ವಿದ್ಯಾರ್ಥಿಗಳ ಪ್ರಾಜೆಕ್ಟ್ ಪ್ರದರ್ಶನ ಮತ್ತು ಸ್ಪರ್ಧೆ 'ಸೃಷ್ಟಿ'ಗೆ ಭಾನುವಾರ ತೆರೆ ಬಿದ್ದಿತು.

ವಿಜಯವಾಣಿ ದಿಗ್ವಿಜಯ 24X7 NEWS ಮಾಧ್ಯಮ ಸಹಯೋಗ

3 ದಿನಗಳ ಮೇಳದಲ್ಲಿ 150 ಕಾಲೇಜುಗಳ 1,800 ವಿದ್ಯಾರ್ಥಿಗಳು ಪಾಲ್ಗೊಂಡು 280 ಪ್ರಾಜೆಕ್ಟ್‌ಗಳನ್ನು ಪ್ರದರ್ಶಿಸಿದರು. ಇಂಜಿನಿಯರಿಂಗ್ ವಿದ್ಯಾರ್ಥಿಗಳಲ್ಲದೆ, ಚಿತ್ರಕಲಾ ವಿದ್ಯಾರ್ಥಿಗಳು ಪ್ರತಿಭೆ ತೋರಿಸಿದ್ದರು. ಮಣ್ಣಿನ ಕಲಾಕೃತಿಗಳು, ಗೋಡೆ ಚಿತ್ರ, ನಾಟಕ, ಛಾಯಾಚಿತ್ರ ಪ್ರದರ್ಶಿಸಿದ್ದರು. ಬಾಗಲಕೋಟೆಯ ಬಸವೇಶ್ವರ ಇಂಜಿನಿಯರಿಂಗ್ ಕಾಲೇಜು ಸಮಗ್ರ ಚಾಂಪಿಯನ್ ಪ್ರಶಸ್ತಿ ಗೆದ್ದುಕೊಂಡಿತು. ಬೆಂಗಳೂರಿನ ಸಿಎಂಆರ್‌ಐಟಿ ದ್ವಿತೀಯ ಹಾಗೂ ಹುಬ್ಬಳಿಯ ಬಿವಿಬಿ ತಾಂತ್ರಿಕ ಕಾಲೇಜು ತೃತೀಯ ಸ್ಥಾನ ಪಡೆದವು. ಆರ್.ವಿ. ತಾಂತ್ರಿಕ ಕಾಲೇಜು 'ವಿದ್ಯಾರ್ಥಿಸ್ನೇಹಿ ಕಾಲೇಜು' ಪ್ರಶಸ್ತಿ ಪಡೆಯಿತು. ವಿವಿಧ ವಿಭಾಗಗಳಲ್ಲಿ 40 ಕಾಲೇಜುಗಳು 10 ಲಕ್ಷ ರೂ. ಬಹುಮಾನ ಹಂಚಿಕೊಂಡವು. ಬೆಳಗಾವಿಯ ನಿಡಸೋಸಿಯ ಹೀರಾ ಶುಗರ್ಸ್ ತಾಂತ್ರಿಕ ಕಾಲೇಜು ವಿದ್ಯಾರ್ಥಿಗಳು ರೂಪಿಸಿದ 'ವಿದ್ಯುತ್ ಚಾಲಿತ ವಾಹನ'ನಕ್ಕೆ ಅನ್ವೇಷಣೆ (ಮೆಕಾನಿಕಲ್) ವಿಭಾಗದಲ್ಲಿ ಪ್ರಥಮ ಸ್ಥಾನ ಗಳಿಸಿಕೊಂಡಿತು.




ಸಮಾರೋಪ ಸಮಾರಂಭದಲ್ಲಿ ಡಾ. ಅನಿಲ್ ಕಾಕೋಡ್ಕರ್ ಮಾತನಾಡಿದರು. ವಿಟಿಯು ಕುಲಪತಿ ಡಾ. ಕರಿಸಿದ್ದಪ್ಪ ಮತ್ತಿತರರು ಉಪಸ್ಥಿತರಿದ್ದರು.

> ನಗರ ಮತ್ತು ಗ್ರಾಮೀಣ ಪ್ರದೇಶಗಳ ಅಂತರ ಹೆಚ್ಚಿದೆ. 2011ರ ಜನಗಣತಿ ಪ್ರಕಾರ ಗ್ರಾಮೀಣ ಭಾಗದ ಶೇ.30 ಜನ ಕೃಷಿಯನ್ನೇ ಅವಲಂಬಿಸಿದ್ದಾರೆ. ಶೇ.50 ಜನ ಕೂಲಿ ಮಾಡುತ್ತಿದ್ದಾರೆ. ಶೇ.1.5 ಜನರು ಮಾತ್ರವೇ ಆರ್ಥಿಕವಾಗಿ ಮುಂದಿದ್ದಾರೆ. ಹೀಗಾಗಿ ಗ್ರಾಮೀಣ ಭಾಗದ ಜನರನ್ನು ಮುಂದೆ ತರಬೇಕಾದಲ್ಲಿ ಕೃಷಿ ಕ್ಷೇತ್ರದಲ್ಲಿ ಅಭಿವೃದ್ಧಿ ಆಗಬೇಕು.
>
> | **ಡಾ.ಅನಿಲ್ ಕಾಕೋಡ್ಕರ್** ಬಾಬಾ ಅಣು ಸಂಶೋಧನಾ ಕೇಂದ್ರದ ಮಾಜಿ ನಿರ್ದೇಶಕ

## ಶಿಕ್ಷಣ-ಕೈಗಾರಿಕೆ ಸಮನ್ವಯ ಅಗತ್ಯ

**ಬೆಂಗಳೂರು:** ವಿದ್ಯಾರ್ಥಿಗಳು ಉದ್ಯಮಗಳ ಜತೆ ಜತೆಗೆ ಬೆರೆತು ಕಲಿಯಬೇಕು. ಶೈಕ್ಷಣಿಕತೆ ಮತ್ತು ಕೈಗಾರಿಕೋದ್ಯಮ ನಡುವೆ ಸಮನ್ವಯತೆ ಇದ್ದರೆ ಉತ್ತಮ ಎಂದು ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ (ಎಐಟಿಇಸಿ) ಅಧ್ಯಕ್ಷ ಅನಿಲ್ ಸಹಸ್ರಬುದ್ಧೆ ಹೇಳಿದ್ದಾರೆ. ಎಬಿವಿಪಿ ನಡೆಸುತ್ತಿರುವ ಸೃಷ್ಟಿ ಕಾರ್ಯಕ್ರಮದಲ್ಲಿ 'ಕೈಗಾರಿಕೆ ಮತ್ತು ಸಂಸ್ಥೆಗಳ ಸಂವಾದ' ವಿಚಾರ ಸಂಕಿರಣದಲ್ಲಿ ಪಾಲ್ಗೊಂಡ ಅವರು, ತಾಂತ್ರಿಕ ಶಿಕ್ಷಣದಲ್ಲಿ ಇಂಟರ್‌ಶಿಪ್ ಕಡ್ಡಾಯ ಮಾಡುವ ಮೂಲಕ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಮತ್ತು ಹೊಸ ಆಲೋಚನೆಗಳಿಗೆ ಪುಷ್ಟಿ ನೀಡುವಂತಾಗಬೇಕು. ಕಾಲೇಜುಗಳಲ್ಲಿರುವ ಪ್ರಾಯೋಗಾಲಯಗಳು ಮತ್ತು ಗ್ರಂಥಾಲಯಗಳು ಹೆಚ್ಚು ಬಳಕೆಯಾಗಬೇಕು ಎಂದರು. ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಕುಲಪತಿ ಪ್ರೊ.ಕರಿಸಿದ್ದಪ್ಪ, ನಿರಂತರ ಕಲಿಕೆಯಿಂದ ಯಾವುದೇ ಅದ್ಭುತಗಳನ್ನೂ ಸಾಧಿಸಬಹುದು. ಇಂದಿನ ತಂತ್ರಜ್ಞಾನದ ಹೊಸತನಕ್ಕೆ ತಕ್ಕಂತೆ ನಾವೂ ಒಗ್ಗಿಕೊಳ್ಳಬೇಕು. ಉದ್ಯಮಕ್ಕೆ ಬೇಕಾದ ಎಲ್ಲ ಸಾಮರ್ಥ್ಯವನ್ನು ಬೆಳೆಸಿಕೊಂಡು ಮುನ್ನಡೆಯಬೇಕೆಂದು ಕರೆ ನೀಡಿದರು. ಆರ್.ವಿ .ಶಿಕ್ಷಣ ಸಂಸ್ಥೆಯ ಸಹ ಕಾರ್ಯದರ್ಶಿ ಡಿ.ಪಿ.ನಾಗರಾಜ್ ಇತರರು ಇದ್ದರು.

» **ಎಐಟಿಇಸಿ ಅಧ್ಯಕ್ಷ ಅನಿಲ್ ಸಹಸ್ರಬುದ್ಧೆ ಅಭಿಮತ**